ದೇವರ ರಾಜ್ಯದ

# ಸದ್ವಾರ್ತೆ

ಸಂಪುಟ 4 | ಉಚಿತ ಹಂಚಿಕೆ | ಸಂಚಿಕೆ 44

## ಕಲ್ವರಿಯ ಪೂರ್ವಾವಲೋಕನ-2

### (Preview of Calvary)

—ಭಾ. ಚಂದುದಾಸ್

> "ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು." (ರೋಮಾಪುರ 5:12)

ಇದು ನಮಗೆ ಹೇಗೆ ಸಹಾಯವಾಗುತ್ತದೆ? ಪ್ರಾರಂಭದಲ್ಲಿಯೇ ಚಿತ್ರಿಸಲಾಗಿರುವ ಮತ್ತೊಂದು ದೈವೀಕ ನಿಯಮದೊಂದಿಗೆ ಸೇರಿಸುವುದರಿಂದ. ಅದನ್ನು ಪೌಲನು ನಮಗೆ ಸರಳವಾಗಿ ತಿಳಿಸಿದ್ದಾನೆ. "ಪಾಪದ ಸಂಬಳ ಮರಣ" (ರೋಮಾಪುರ 6:23). ಈ ಹೇಳಿಕೆಯ ಚಾರಿತ್ರಿಕ ಚಿತ್ರವು ಇದಾಗಿದೆ. "ನೀನು ಇದನ್ನು ಮಾಡಿದ್ದರಿಂದ" — ಅಂದರೆ ಪಾಪ ಮಾಡಿದ್ದರಿಂದ, ಅಂದರೆ ದೈವೀಕ ಆಜ್ಞೆಯನ್ನು ಮೀರಿದ್ದರಿಂದ—"ನೀನು ತಿರಿಗಿ ಮಣ್ಣಿಗೆ ಸೇರುವತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ, ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದಿ". ಇದೇ ಮರಣವೆಂಬುದಾಗಿದೆ. ಮರಣದ ಶಾಪದೊಂದಿಗೆ ದೇವರು ಈ ಪುಸ್ತಕವನ್ನು ಮುಗಿಸಿದ್ದಲ್ಲಿ ನಮಗೆ ಉಳಿದದ್ದೇನೆಂದರೆ ಸಾಯುವುದೊಂದೇ. ಆದರೆ ದೇವರು ಪುಸ್ತಕವನ್ನು ಅಲ್ಲಿಗೇ ಮುಗಿಸಲಿಲ್ಲ. ದೇವರು ಮಾನವನನ್ನು ಅವನಷ್ಟಕ್ಕೇ ಬಿಡಲಿಲ್ಲ. ಅವಿಧೇಯತೆಯು ಹಾಗೂ ಶಾಪದ ಸಂದಿಗ್ಧತೆಯಲ್ಲಿಯೇ ದೇವರು ಒಂದು ಛಾಯಾ ಪದ್ಧತಿಯನ್ನು ಒದಗಿಸಿದನು. ಅದರಿಂದಾಗಿ ಮಾನವನು ಶಾಪಗ್ರಸ್ತನಾಗಿ ದೇವರಿಂದ

ದೂರವಾಗಿದ್ದರೂ ಸಹ, ಮುಂದಿನ ಬಹುದೂರದ ಒಂದು ದಿವಸದಲ್ಲಿ ತನ್ನ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳುವ ನಿರೀಕ್ಷೆಯಲ್ಲಿ ಮಾನವನು ದೇವರನ್ನು ಮೆಚ್ಚುವ ರೀತಿಯಲ್ಲಿ ಸಮೀಪಿಸಲು ಮಾರ್ಗವಾಯಿತು. ಮಾನವನು ತನ್ನ ಕೈಗಳನ್ನು ಆ ಪ್ರಾಣಿಯ ತಲೆಯ ಮೇಲಿಟ್ಟು ತನ್ನ ಪಾಪಗಳನ್ನು ಅರಿಕೆ ಮಾಡಿ, ಅದನ್ನು ಕೊಂದು, ಅದರ ರಕ್ತವನ್ನು ತೆಗೆದುಕೊಂಡು, ದೇವರಿಗರ್ಪಿಸಬೇಕೆಂದು ನೇಮಿಸಲಾಗಿತ್ತು. ಸುರಿಸಲ್ಪಟ್ಟ ಆ ರಕ್ತವು ಅರ್ಪಿಸಲ್ಪಟ್ಟ ಜೀವವಾಗಿತ್ತು. ದೇವರು ನೇಮಿಸಿದ ರೀತಿಯಲ್ಲಿ ಆತನ ಬಳಿ ಬರುವಾಗ ಮಾನವನು ಇದನ್ನು ಒಪ್ಪಿಕೊಂಡಿದ್ದನು. ದೇವರು ಇದನ್ನು ಮೆಚ್ಚಿದನು.

## ಪ್ರಾಣಿಯ ರಕ್ತದಲ್ಲಿ ಶಕ್ತಿ ಇಲ್ಲದಿರುವಿಕೆ

ಆದರೂ ಪೌಲನು ಹೇಳುತ್ತಾನೆ. "ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿದೆಯಲ್ಲಾ" (ಇಬ್ರಿಯ 10:4). ಕ್ರಿಸ್ತನ ರಕ್ತದಿಂದ ಇದು ಸಾಧ್ಯವಾಗುವದಾದಲ್ಲಿ, ಮತ್ತೊಂದು ಸಮಸ್ಯೆ ಬರುತ್ತದೆ. ಅದೇನೆಂದರೆ, ಹೋತ ಹೋರಿಗಳ ರಕ್ತ ಚೆಲ್ಲುವಿಕೆಯು, ಕ್ರಿಸ್ತನ ರಕ್ತದ ಮೂಲಕ ದೇವರ ಬಳಿ ಬರುವ ಮನುಷ್ಯನಂತೆಯೇ ಹೋತ ಹೋರಿಗಳ ರಕ್ತವನ್ನು ಚೆಲ್ಲಿ ಆ ಪಾಪವನ್ನು ಅರಿಕೆ ಮಾಡಿ, ಮುಂದೆಂದಿಗೂ ಅಂತಹ ಪಾಪವನ್ನು ಮಾಡುವುದಿಲ್ಲವೆಂಬ ಶಪಥವನ್ನು ಮಾಡಿ, ಅದನ್ನು ಅರ್ಪಿಸುವ ಮನುಷ್ಯನೂ ಇರುವಾಗ ಹೋತ ಹೋರಿಗಳ ರಕ್ತ ಚೆಲ್ಲುವಿಕೆಯಿಂದ ಪಾಪಪರಿಹಾರ ಏಕೆ ಸಾಧ್ಯವಿಲ್ಲ? ಈ ಸಮಸ್ಯೆಗೆ ಉತ್ತರವನ್ನು ಕ್ರಿಸ್ತನ ಮರಣದ ಬಗ್ಗೆ ಪೌಲನು ಹೇಳಿರುವುದರಲ್ಲಿ ಕಾಣಬಹುದು. ರೋಮಾಪುರ 3:21-22 ರಲ್ಲಿ "ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಕ್ರಿಸ್ತನಲ್ಲಿ ಪ್ರಕಟವಾಯಿತು." ವಚನ 25-26 "ಈತನು ತನ್ನ ರಕ್ತವನ್ನು ಸುರಿಸಿ, ನಂಬಿಕೆಯಿದ್ದವನಾಗಿ ಕೃಪಾಧಾರವಾಗಬೇಕೆಂದು ದೇವರು ಹಿಂದಿನಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿ ಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ." ಇದನ್ನು ನಾವು ಸ್ವಲ್ಪ ಆಲೋಚಿಸಿದಲ್ಲಿ, ಅದು ಪೂರ್ಣವಾದ ವಿವರಣೆ ನೀಡುತ್ತದೆಂದು ತಿಳಿಯುತ್ತದೆ. ಪ್ರಥಮವಾಗಿ, ಅದು ಎಲ್ಲಕ್ಕಿಂತ ಮುಂದಾಗಿ ಕ್ಷಮಾಪಣೆಯನ್ನು ಮುಂದಿಡುತ್ತದೆ. "ದೇವರ ದೀರ್ಘ ಸಹನೆಯಿಂದಾಗಿ"— "ಬದಲಾಗಿ" ಎನ್ನುವ ಕಲ್ಪನೆಗೆ ವ್ಯತ್ಯಾಸವಾದಂಥದ್ದು. "ಬದಲಿ" ಕಲ್ಪನೆಯು ಕ್ಷಮಾಪಣೆಯನ್ನು ಅಳಿಸಿಬಿಡುತ್ತದೆ ಯಾಕಂದರೆ ಸಾಲವನ್ನು ಮತ್ತೊಬ್ಬನಿಂದ ಪಡೆಯಲಾಗಿದೆಯೆಂದು ಹೇಳಲಾಗುತ್ತದೆ. ಅದು ಹಾಗಿಲ್ಲ.

ದೇವರು ಕ್ಷಮಿಸುತ್ತಾನೆ; ಅಪೋಸ್ತಲರು ಸಾರಿದ ಸುವಾರ್ತೆಯಲ್ಲಿ ಇದು ಬಹು ಪ್ರಾಮುಖ್ಯವಾದ ಲಕ್ಷಣವಾಗಿತ್ತು; "ಆತನ (ಕ್ರಿಸ್ತನ) ಮೂಲಕವಾಗಿ ಪಾಪ ಪರಿಹಾರವು (ಕ್ಷಮಾಪಣೆಯು) ದೊರೆಯುತ್ತದೆಂದು ನಿಮಗೆ ಸಾರೋಣವಾಗುತ್ತದೆಂದು ನಿಮಗೆ ತಿಳಿದಿರಲಿ" (ಅ. ಕೃ. 13:38). "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ.... ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ." "ದೇವರು ಕ್ರಿಸ್ತನಿಗೋಸ್ಕರ ನಿಮ್ಮ ಪಾಪಗಳನ್ನು ಕ್ಷಮಿಸಿದ್ದಾನೆ."

## ಕ್ಷಮಾಪಣೆಯ (ಪಾಪ ಪರಿಹಾರದ) ಷರತ್ತುಗಳು

ಆದರೆ ಪಾಪ ಕ್ಷಮಾಪಣೆಗೆ ಆದರದೇ ಷರತ್ತುಗಳಿವೆ. ದೇವರು ಗೊತ್ತು ಗುರಿಯಿಲ್ಲದೆ ಕ್ಷಮಾಪಣೆಯನ್ನು ನೀಡುವುದಿಲ್ಲ. ಆತನ ಬಗ್ಗೆ ಲಕ್ಷ್ಯವಿಡಲಿ ಇಡದೇ ಇರಲಿ, ದೇವರು ಲೋಕದ ಪಾಪವನ್ನು ಕ್ಷಮಿಸುತ್ತೇನೆಂದು ಹೇಳುವುದಿಲ್ಲ. ಯಾರು ಆತನಲ್ಲಿ ಭಯಭಕ್ತಿ ಇಡುತ್ತಾರೆ ಮತ್ತು ಯಾರು ಆತನು ಒದಗಿಸಿರುವ ಷರತ್ತುಗಳಿಗೆ ಒಳಪಡುತ್ತಾರೋ ಅಂಥವರಿಗೆ ಪಾಪ ಕ್ಷಮಾಪಣೆಯನ್ನು ಮೀಸಲಿಡುತ್ತಾನೆ. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ – ಆ ಷರತ್ತುಗಳೇನು? ಅನೇಕ ಷರತ್ತುಗಳಿವೆ. ಆದರೆ ಈಗ ನಾವು ಅಧೀನ ಷರತ್ತುಗಳನ್ನು ನೋಡದೇ, ಎಲ್ಲಕ್ಕಿಂತ ಪ್ರಾಮುಖ್ಯವಾದ ಷರತ್ತನ್ನು ನೋಡೋಣ. ಇದನ್ನು ಪೌಲನು ನಮ್ಮ ಮುಂದೆ ಘೋಷಿಸಿದ್ದಾನೆ— ಯೇಸುಕ್ರಿಸ್ತನು ತನ್ನ ರಕ್ತವನ್ನು ಸುರಿಸಿದ್ದರಿಂದ ನಂಬಿಕೆಯನ್ನು ಹೊಂದಲು ಪ್ರಾಯಶ್ಚಿತ್ತನಾಗಿ ಆತನನ್ನು ದೇವರು ಮುಂದಿಟ್ಟಿದ್ದಾನೆ. ಪಾಪ ಪರಿಹಾರವನ್ನು ಇಲ್ಲಿ ಅರ್ಪಿಸಲಾಗಿದೆ – ಅದಿಲ್ಲದೆ ಸಾಧ್ಯವಿಲ್ಲ. ಅದನ್ನು ಹೊರತುಪಡಿಸುವಹಾಗಿಲ್ಲ. ಮುಂದಿರುವ ಪ್ರಶ್ನೆ ಏನೆಂದರೆ– ಕ್ರಿಸ್ತನ ಮರಣವು ನಿತ್ಯ ಜೀವ ಹೊಂದಲು ಪಾಪ ಪರಿಹಾರಕ್ಕಾಗಿ ಸಾಕಷ್ಟು ಆಧಾರವಾಗಿದೆಯೆಂದರೆ ಪ್ರಾಣಿಗಳ ರಕ್ತದಲ್ಲಿ ಏಕೆ ಇದು ಸಾಧ್ಯವಿಲ್ಲ? ಕ್ರಿಸ್ತನ ಮರಣವು ದೇವರ ದೀರ್ಘ ಸಹನೆಯ ನೀತಿಯನ್ನು ಪ್ರಕಟಪಡಿಸಲು ಎಂಬುದರಲ್ಲಿ ಇದಕ್ಕೆ ಉತ್ತರವಿದೆ. ಅಂದರೆ ನಮ್ಮನ್ನು ಕ್ಷಮಿಸುವಾಗ ದೇವರು ತನ್ನದೇ ನೀತಿಯನ್ನು ತನ್ನದೇ ಪರಮಾಧಿಕಾರವನ್ನು ಉಳಿಸಿಕೊಂಡಿರುತ್ತಾನೆ. ನಮ್ಮ ಪಾಪಗಳನ್ನು ಕ್ಷಮಿಸುವಲ್ಲಿ ಆತನ ದೀರ್ಘ ಸಹನೆಯನ್ನು ತೋರುವಲ್ಲಿನ ಷರತ್ತುಗಳಾಗಿ ನಾವು ಅವುಗಳನ್ನು ಅರಿಯಬೇಕೆಂದೂ ಹಾಗೂ ಅವುಗಳಿಗೆ ಒಳಪಡಬೇಕೆಂದೂ ಅಪೇಕ್ಷಿಸುತ್ತಾನೆ. ಈಗ ನಾವು ಕ್ರಿಸ್ತನನ್ನು ನೋಡುವಾಗ, ಆತನು ತನ್ನ ಮರಣದಲ್ಲಿ ಆ ನೀತಿಯನ್ನು ಪ್ರಕಟಪಡಿಸಿರುವುದನ್ನು ನಾವು ಕಾಣುತ್ತೇವೆ. ಒಂದು ಕುರಿಮರಿಯನ್ನಾಗಲೀ ಅಥವ ಯಾವುದೇ ಪ್ರಾಣಿಯನ್ನಾಗಲೀ ಬಲಿಯಾಗಿ ಅರ್ಪಿಸಿರುವುದನ್ನು ನಾವು ನೋಡಿದಾಗ, ಅದು ದೇವರ ನೀತಿಯನ್ನು ಪ್ರಕಟ

ಪಡಿಸಿರುವುದಿಲ್ಲ; ಬದಲಾಗಿ ಅದು ಛಾಯೆಯಾಗಿ, ಒಂದು ಸಂಕೇತವಾಗಿ ತೋರುತ್ತದೆ. ಆ ಪ್ರಾಣಿಯು ಯಾವ ತಪ್ಪನ್ನೂ ಮಾಡಿರುವುದಿಲ್ಲ ಮತ್ತು ಒಬ್ಬರ ಪಾಪಕ್ಕೆ ಮತ್ತೊಂದನ್ನು ದಂಡನೆಗೆ ಗುರಿ ಮಾಡುವುದು ನೀತಿಯಲ್ಲ. ಕ್ರಿಸ್ತನ ಮರಣವು, "ದೇವರು ನೀತಿವಂತನು" ಎಂಬುದನ್ನು ಆತನು (ದೇವರು) ಕ್ಷಮಿಸುವವನಾಗಿ ಕಾರ್ಯ ನಿರ್ವಹಿಸುವಲ್ಲಿ ತೋರಿಸುತ್ತದೆ. ಪ್ರಾಣಿಗಳ ಬಲಿಯಲ್ಲಿ ಇದನ್ನು ನಿರೂಪಿಸಲಾಗಲಿಲ್ಲ – ಅದು ಕೇವಲ ಪ್ರತಿರೂಪವಾಗಿತ್ತು. ಅದು ಪ್ರಧಾನ ರೂಪದಲ್ಲಿ ಮಾತ್ರ ದೇವರ ನೀತಿಯನ್ನು ಪ್ರದರ್ಶಿಸಿತು. ಅದು ದೇವರು ತಾನೇ ಒದಗಿಸುವ ತನ್ನ ಕುರಿಯಲ್ಲಿ ಅದನ್ನು ನೆರವೇರಿಸುತ್ತಾನೆಂಬ ದೇವರ ನೀತಿಯ ನಿಜವಾದ ಛಾಯಾರೂಪವಾಗಿತ್ತು. "ದೇವರು ತಾನೇ ಕುರಿಮರಿಯನ್ನು ಒದಗಿಸುತ್ತಾನೆ ಮಗನೆ" ಎಂದು ಅಬ್ರಹಾಮನು ಇಸಾಕನಿಗೆ ಹೇಳಿದನು. ಆತನು ದೇವರಾತ್ಮನಿಂದ ಮುಂದಿನ ಕಾಲಕ್ಕೆ ಮಾತಾಡಿದನು. ಯೇಸುವು ಕಾಣಿಸಿಕೊಂಡಾಗ, ಯೋಹಾನನು, "ಅದೋ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" ಎಂದು ಹೇಳಿದನು.

## ಈ ಪ್ರಾಯಶ್ಚಿತ್ತವು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿತ್ತು ?

ಒಬ್ಬ ನಿರಪರಾಧಿ, ಪಾಪರಹಿತ ಪರಿಪೂರ್ಣ ಮನುಷ್ಯನ ಕ್ರೂರ್ಯದ ಬಲಿಯಲ್ಲಿ ದೇವರ ನೀತಿಯು ಯಾವ ರೀತಿಯಲ್ಲಿ ಘೋಷಿಸಲ್ಪಟ್ಟಿತ್ತು ಎಂಬ ದೃಷ್ಟಿಯಿಂದ ಈ ಗುಣದಲ್ಲಿ ಕ್ರಿಸ್ತನ ಮೇಲೆ ನಮ್ಮ ಗಮನವನ್ನು ಹರಿಸಬೇಕು. ಆತನು ಯಾರಾಗಿದ್ದನು ಎಂದು ನಾವು ಪ್ರಥಮವಾಗಿ ಕೇಳಬೇಕು. ಆತನು ದೇವರ ಮಗನಾಗಿದ್ದನೆಂಬುದು ಸತ್ಯವೇದದ ಸಿದ್ಧವಾದ ಉತ್ತರವಾಗಿದೆ. ಆದರೆ ಆತನು ಅದಕ್ಕಿಂತಲೂ ಹೆಚ್ಚಿನವನಾಗಿದ್ದನು. ಆತನು ಅಷ್ಟೇ ಆಗಿದ್ದಲ್ಲಿ, ತನ್ನನ್ನು ಬಲಿ ಕೊಡುವಲ್ಲಿ ದೇವರ ನೀತಿಯನ್ನು ಪ್ರಸಿದ್ಧಿ ಪಡಿಸಲು ಆತನ ಅರ್ಹತೆಯು ಸಾಕಾಗುತ್ತಿರಲಿಲ್ಲ. ಆತನು ದೇವರ ಮಗನೆನಿಸಿಕೊಂಡಿದ್ದರೂ ಸಹ, ಒಬ್ಬ ಸ್ತ್ರೀಯಲ್ಲಿ ಹುಟ್ಟಿದವನಾಗಿದ್ದು, ಮನುಷ್ಯಕುಮಾರನೂ ಆಗಿದ್ದನು. ಆತನು ಎರಡನೇ ಆದಾಮು ಅಥವ ಕಡೇ ಆದಾಮನೆಂದು ಕರೆಯಲ್ಪಟ್ಟಿದ್ದರೂ ಸಹ ಆತನು ಒಬ್ಬ ನೂತನ ಆದಾಮನಾಗಿರಲಿಲ್ಲ. ಆದಾಮನಂತೆ ಈತನನ್ನು ನೆಲದ ಮಣ್ಣಿನಿಂದ ಹೊಸದಾಗಿ ಉಂಟು ಮಾಡಿರಲಿಲ್ಲ. ಈತನು ದೇವದೂತರ ಪ್ರಕೃತಿಯನ್ನೂ ಹೊಂದಿರಲಿಲ್ಲ; ಭೌತಿಕವಾಗಿ ಆತನು ನಮಗಿಂತ ಭಿನ್ನವಾಗಿರಲಿಲ್ಲ. ಸ್ತ್ರೀಯಲ್ಲಿ ಹುಟ್ಟಿದವನಾಗಿ, ನಮ್ಮಂತೆಯೇ ಹುಟ್ಟಿದವನಾಗಿ, ಅಪೋಸ್ತಲರ ಬರಹಗಳ ಪ್ರಕಾರ

**ವಾಕ್ಯದಲ್ಲಿಯೇ** ಆತನನ್ನು ಹೀಗೆ **ಪರಿಚಯ** ಮಾಡಲಾಗಿದೆ, "ದಾವೀದನ ಮಗನು ಮತ್ತು ಅಬ್ರಹಾಮನ ಮಗನು". ಪೌಲನು ಹೇಳುತ್ತಾನೆ, "ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನು." (ರೋಮಾಪುರ 1:3) ಅಥವಾ ಇಬ್ರಿಯ 2:14 ರಲ್ಲಿ ಹೇಳಿರುವಂತೆ "ನಮ್ಮಂತೆಯೇ ರಕ್ತಮಾಂಸಧಾರಿಯಾಗಿ, **ಮರಣ ದಿಂದಲೇ** ಆತನು ನಮೆಲ್ಲರನ್ನೂ ನಾಶಪಡಿಸುವಂತದನ್ನು ರದ್ದುಗೊಳಿಸಿ, ನಿಷ್ಕ್ರಿಯ ಗೊಳಿಸಿ, ನಾಶಪಡಿಸಿದನು."

ಹಾಗಾದರೆ, ಅದು ಏನಾಗಿತ್ತು? ಇದನ್ನು ನೋಡಬೇಕಾದಲ್ಲಿ, ಹಿಂದಕ್ಕೆ ಏದೆನ್ ತೋಟದಲ್ಲಿ ಆದಾಮನಲ್ಲಿಗೆ ಹೋಗಿ, ಆತನು ಮರಣದ ಶಾಪಕ್ಕೆ ಒಳಗಾಗಿದ್ದನ್ನು ನೋಡಬೇಕು. ಒಂದು ಜೀವಿಯ ಮೇಲೆ ಅಂತಹ ಪರಿಣಾಮವನ್ನು ನಾವು ಎಲೀಷನ ಮುಂದೆ ನಿಂತ ಗೇಹಜಿಯಲ್ಲಿ ನಿದರ್ಶಿಸಿರುವುದನ್ನು ಕಾಣಬಹುದು. "ನಾಮಾನನ ಕುಷ್ಠವು ನಿನ್ನನ್ನು ನಿನ್ನ ಸಂತಾನದವರನ್ನೂ ಸದಾಕಾಲ ಹಿಡಿದಿರುವುದು" (2 ಅರಸು 5:27) ಅದು ಶಾಪವಾಗಿತ್ತು. "ಅವನು ಹಿಮದಂತೆ ಬಿಳುಪಾಗಿ ಅವನ ಸನ್ನಿಧಾನದಿಂದ ಹೊರಟು ಹೋದನು." ಎಲೀಷನ ಮಾತು ನಿಜವಾಗಿ ಪರಿಣಮಿಸಿ, ಕುಷ್ಠವಾಯಿತು. ಆದಾಮನಿಗೆ ದೇವರ ಮಾತು ನಿಜವಾಗಿ ಪರಿಣಮಿಸಿ, ಅವನನ್ನು ಮರಣಕ್ಕೊಳಗಾದ ಮನುಷ್ಯನನ್ನಾಗಿ ಮಾಡಿತು; ಅವನು ಇದಕ್ಕೆ ಮುಂಚೆ ಮರಣಕ್ಕೆ ಅಧೀನನಾಗಿರಲಿಲ್ಲ. ಯಾಕಂದರೆ ಪಾಪವು ಮರಣವು ಒಳಕ್ಕೆ ಪ್ರವೇಶಿಸಿದ ಬಾಗಿಲಾಗಿತ್ತು. "ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು." (ರೋಮಾಪುರ 5 : 12) ಮಾನವನಿಂದ ಮರಣವು ಬಂದಿತು. "ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವ ನಾಗಿದ್ದೀ." (ಆದಿಕಾಂಡ 3:19). ತಕ್ಷಣದಲ್ಲಿಯೇ ಅವನು ಕೊಲ್ಲಲ್ಪಡಲಿಲ್ಲ. ಮಾನವನೊಂದಿಗೆ ಇರುವ ದೇವರ ಉದ್ದೇಶಕ್ಕೆ ನಿಧಾನವಾದ ಮರಣವೇ ಇರಬೇಕಾಗಿತ್ತು, ಯಾಕಂದರೆ ಕೆಟ್ಟದ್ದರಿಂದ ಬಹಳಷ್ಟು ಒಳ್ಳೇದನ್ನು ತರುವುದೇ ಆತನ ಉದ್ದೇಶವಾಗಿತ್ತು; ಇಬ್ಬರು ಪಾಪಿಗಳಿಂದ ಒಂದು ನೀತಿವಂತ ಮಹಾ ಸಮೂಹವನ್ನು ತರಬೇಕಿತ್ತು. ಆದ್ದರಿಂದ ಆತನು (ದೇವರು) ಒಂದು ಕಟ್ಟಳೆಯನ್ನು ಸ್ಥಾಪಿಸುವುದರ ಮೂಲಕ ನಿಧಾನವಾದ ಮರಣವನ್ನು ಉಂಟುಮಾಡಿದನು. ಅದು ಹೇಗೆಂದರೆ ಒಂದು ಅಲಾರಂ ಗಡಿಯಾರವನ್ನು ಗೊತ್ತಾದ ಸಮಯಕ್ಕೆ ಗಂಟೆ ಹೊಡೆಯುವಂತೆ ಸಿದ್ಧಪಡಿಸಿ, ಅದರಲ್ಲಿರುವ ಯಾಂತ್ರಿಕತೆಯು ಕ್ಲುಪ್ತ ಸಮಯಕ್ಕೆ ಸರಿಯಾಗಿ ಗಂಟೆ ಹೊಡೆಯುವಂತೆ ಮಾಡುವುದೇ ಆಗಿದೆ. ದೇವರ ಮಾತು ಆದಾಮನಲ್ಲಿ ಒಂದು ಮರ್ತ್ಯ ಶರೀರದ ಒಬ್ಬ ಮರ್ತ್ಯ ಮಾನವನನ್ನಾಗಿ ಮಾಡಿತು. ಮರ್ತ್ಯರಾಗಿರುವ ಆದಾಮ ಮತ್ತು ಹವ್ವಳ ಕಡೆಗೆ ನೋಡಿ. ಕಾಲಾನಂತರ ಅವರಿಗೆ

ಮಕ್ಕಳಾಗುತ್ತವೆ; ಅವರೇನಾಗಬಲ್ಲರು? ಅವರಂತೆಯೇ, ಅವರ ಮಕ್ಕಳೂ ಕೂಡ ಮರ್ತ್ಯರಾಗಿರುತ್ತಾರೆ. ಒಬ್ಬ ಮರ್ತ್ಯನು ನಿತ್ಯಜೀವಿ (ಅಮರಜೀವಿ) ಯನ್ನು ಪಡೆಯಬಲ್ಲದಾಗುತ್ತದೆಯೋ? "ಮರ್ತ್ಯ"ನೆಂದರೆ ಮರಣದಿಂದ ಕೂಡಿರುವುದು ಎಂದರ್ಥ. ಯಾಕೆ ಮರಣದಿಂದ ಕೂಡಿರುವುದು? ಯಾಕಂದರೆ ಆದಾಮನ ಪಾಪದಿಂದ.

## ಬಹು ಸರಳ, ಬಹು ಸಕಾರಣವಾದದ್ದು

ಅದು ಬಹು ಸರಳವಾಗಿರುತ್ತದೆ ಹಾಗೂ ಬಹು ಸಕಾರಣವಾದದ್ದಾಗಿದೆ. ಅದರ ಸರಳತೆಗೆ, ವಿಶ್ವದ ಮಹತ್ತರವಾದ ವಿವಿಧ ಸೃಷ್ಟಿಗಳೆಲ್ಲವೂ ಬಹು ಸರಳವಾಗಿದೆ. ನಮಗೆ ಜೀವಕೊಡಲು ಶ್ವಾಸನಾಳದ ಮೂಲಕ ಶುದ್ಧ ಗಾಳಿಯನ್ನು ಒಳಕ್ಕೆ ಬಿಡುವುದಕ್ಕಿಂತ ಸರಳವಾದದ್ದೇನಿದೆ? ಶ್ವಾಸನಾಳವನ್ನು ಘಟ್ಟಿಯಾಗಿ ಒತ್ತಿ ಹಿಡಿಯಿರಿ, ಆಗ ನಿಮ್ಮ ತತ್ತ್ವಜ್ಞಾನಿಯು ಎಲ್ಲಿರುತ್ತಾನೆ? ಕುತ್ತಿಗೆ ಬಿಗಿಯಲ್ಪಟ್ಟ ಕನಿಷ್ಟವಾದ ಒಂದು ಇಲಿ ಅಥವ ಮೊಲದಂತೆ ಸಲೀಸಾಗಿ ಹೋಗಿಬಿಡುತ್ತಾನೆ. ತತ್ತ್ವಶಾಸ್ತ್ರದ ಜಂಬ ಕೊಚ್ಚಿಕೊಳ್ಳುವಿಕೆಯು ಹುಚ್ಚುತನವಾಗಿದೆ. ದೇವರ ಮಹತ್ತರ ವಾಸ್ತವ ಸಂಗತಿಗಳು ಸರಳವಾದವುಗಳಾಗಿವೆ; ಅವುಗಳನ್ನು ನಾವು "ಚಿಕ್ಕಮಕ್ಕಳ" ಹಾಗೆ ಸ್ವೀಕರಿಸುವುದು ನಮ್ಮ ಕೆಲಸವಾಗಿದೆ.

ಅದರ ಸಕಾರಣತೆಗೆ—ದೇವರು ನಮಗೆ ಆಯ್ಕೆಯ ಶಕ್ತಿಯನ್ನು ಕೊಟ್ಟಿದ್ದಾನೆ. ಈ ಶಕ್ತಿಯು ದೊಡ್ಡ ಕೆಡುಕನ್ನು (ಹಾನಿಯನ್ನು) ಉಂಟು ಮಾಡುವದಕ್ಕೆ ಉಪಯೋಗಿಸಿಕೊಳ್ಳಬಹುದಾದ್ದರಿಂದ, ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ದೇವರು ನಮಗೆ ಹೇಳಬಾರದೋ? ಈ ಬಗ್ಗೆ ಆತನ ಆಜ್ಞೆಯು ನಾವು ಮಾಡಲೇಬೇಕಾದ ವಿಧಿರೂಪದಲ್ಲಿರುವುದು ಅಗತ್ಯವಲ್ಲವೋ? ಆತನ ಚಿತ್ತವು ನಮ್ಮ ಜೀವಿತದ ಕಟ್ಟಳೆಯಾಗಿ ಇರಬೇಕಿರುತ್ತದಲ್ಲವೋ? ಅವಿಧೇಯತೆಯು ದುರಹಂಕಾರವಾಗುವುದಿಲ್ಲವೋ? ಪ್ರತಿಯೊಂದು ಕಾರಣದ ಮೇಲೂ ಪಾಪದ ಸಂಬಳ ಮರಣ ಎಂಬದನ್ನು ಸಮರ್ಥಿಸಲಾಗದಿರುತ್ತದೋ? ಅವೆಲ್ಲ ಪ್ರಶ್ನೆಗಳಿಗೂ ಒಂದೇ ಒಂದು ಉತ್ತರವಿದೆ; ಆ ಉತ್ತರವು ದೇವರ ಮಾರ್ಗಗಳಿಗೆ ಹಾರ್ದಿಕ ಒಪ್ಪಿಗೆಯನ್ನು ತರುವಂತದ್ದಾಗಿದೆ.

"ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾಪುರ 5:12). ಈಗ ಈ ಪರಿಸ್ಥಿತಿಯನ್ನು ಹೇಗೆ ಪರಿಹರಿಸುವುದು? ಅದನ್ನು ಸರಿಪಡಿಸಲು ಮೂರು ಮಾರ್ಗಗಳಿದ್ದವು. ಸಂಪೂರ್ಣ ಮಾನವ

ಕುಲವನ್ನೇ ನಾಶಗೊಳಿಸುವುದು. ಆದರೆ ಇದು ಒಂದು ನಿಕೃಷ್ಟ ಪರಿಹಾರ
ವಾಗುತ್ತಿತ್ತು. ಸೋಲನ್ನು ಒಪ್ಪಿಕೊಂಡಂತಾಗುತ್ತಿತ್ತು ದೇವರು ತನ್ನ ಮಹಿಮೆಗಾಗಿ
ಒಂದು ವ್ಯವಸ್ಥೆಯನ್ನು ಈ ಗ್ರಹದ ಮೇಲೆ ನಡೆಯುವಂತೆ ಮಾಡಿದನು. ಆದರೆ
ಅದು ಸರಿಯಾಗಿ ನಡೆಯುವಂತೆ ಮಾಡಲು ಸಾಧ್ಯವಾಗಲಿಲ್ಲ. ಇದು ನಿಜಕ್ಕೂ
ಅಸಾಧ್ಯವಾದದ್ದು. ದೇವರು ಈ ಲೋಕವನ್ನು ವ್ಯರ್ಥವಾಗಿ ಉಂಟು ಮಾಡಲಿಲ್ಲ
ವೆಂದು ಹೇಳಿದ್ದಾನೆ. (ಯೆಶಾಯ 45:18). ಅದು ನೀತಿವಂತರಿಂದ ತುಂಬಿರ
ಬೇಕೆಂದು ಅದನ್ನು ಉಂಟುಮಾಡಿದನು. ಆತನು ಜೀವಿಸಿರುವುದು ಎಷ್ಟು ಸತ್ಯವೋ
ಅಂತೆಯೇ ಈ ಲೋಕವು ಆತನ ಮಹಿಮೆಯಿಂದ ತುಂಬಿರುವುದು. ಎರಡನೇ
ಮಾರ್ಗವು ಪಾಪವನ್ನು ಸಹಿಸುವುದು ಎಂದು ಕರೆಯಬಹುದಾಗಿದೆ—ಅಂದರೆ ಯಾವ
ತಾರತಮ್ಯವಿಲ್ಲದೆ ಎಲ್ಲರಿಗೂ ಕರುಣೆ ತೋರಿಸುವುದು—ಇದರಿಂದಾಗಿ ಅವಿಧೇಯತ್ವದ
ದುಷ್ಟತೆಯನ್ನು ಗಣನೆಗೆ ತೆಗೆದುಕೊಳ್ಳದೆ, ಮಾನವ ಕುಲವು ತಮ್ಮದೇ ಆದ
ಭೋಗದಲ್ಲಿ ಚಿರಂಜೀವಿಗಳಾಗಿ ಈ ಲೋಕವನ್ನು ತುಂಬಿಕೊಳ್ಳುವುದು. ಆದರೆ ಇದೂ
ಕೂಡ ಅಸಾಧ್ಯವಾದುದಾಗಿತ್ತು. ಇದು ದೇವರ ಅಧಿಕಾರತ್ಯಾಗವೆಂದಾಗಿ ಮಾನವನು
ನಿರಂತರ ಕ್ಲೇಶಕ್ಕೆ ತಳ್ಳಿದಂತಾಗುತ್ತಿತ್ತು. ಇನ್ನೊಂದು ಮೂರನೆಯ ಮಾರ್ಗವಿತ್ತು
— ಮಧ್ಯಂತರ ಮಾರ್ಗ — ಆ ಮಾರ್ಗವನ್ನೇ ದೇವರು ಅನುಸರಿಸಿದ್ದು — ಅಂದರೆ
ಪಾಪಕ್ಕೆ ವಿರುದ್ಧವಾದ ಕಟ್ಟಳೆಯನ್ನು ಜಾರಿಗೆ ತರುವುದು; ಅದೇ ಕಾಲಕ್ಕೆ
ಮಾನಸಾಂತರಪಟ್ಟ ಹಾಗೂ ವಿಧೇಯರಾದ ಪಾಪಿಗಳಿಗೆ ದಯೆ ತೋರಿಸಲು
ಬಾಗಿಲನ್ನು ತೆರೆದಿಟ್ಟಿರುವುದು. ಇಂತಹ ಒಂದು ವಿಧಾನವನ್ನು ಕ್ರಿಸ್ತನ ಜನನ,
ಮರಣ ಮತ್ತು ಪುನರುತ್ಥಾನದಲ್ಲಿ ಎಷ್ಟೊಂದು ಸಾಮರಸ್ಯವಾಗಿ ಪ್ರದರ್ಶಿಸಲ್ಪಟ್ಟಿದೆ!

ಈ ಪ್ರಕರಣದಲ್ಲಿ ಪ್ರಥಮ ಅವಶ್ಯಕತೆಯಾಗಿ, ಆತನು (ಕ್ರಿಸ್ತನು) ಸಾಯ
ಬೇಕೆಂದೇ ಹುಟ್ಟಿದನು ; ಯಾಕೆಂದರೆ ದೇವರ ನೀತಿಯು ಹೀಗೆಯೇ ಘೋಷಿಸ
ಲ್ಪಡಬೇಕಿತ್ತು ; ಪಾಪವು ಅದರದೇ ಆದ ಮಾಂಸದಲ್ಲಿ (ದೇಹದಲ್ಲಿ) ದಂಡಿಸಲ್ಪಟ್ಟು,
ನಂತರ ಬರಬೇಕಾಗಿರುವ ಎಲ್ಲಾ ಒಳ್ಳೇವುಗಳಿಗೆ ಅಸ್ತಿವಾರವಾಗಬೇಕಿತ್ತು. ಯಾವುದೇ
ಒಬ್ಬ ಪಾಪಿಯು ಸ್ವಯಂ ದೇಹಾರ್ಪಣೆಯ ಬಲಿಯಿಂದ ಇಂತಹ ಪರಿಣಾಮವನ್ನು
ಸಾಧಿಸಲು ಆಗುತ್ತಿರಲಿಲ್ಲವೇ ಎಂದು ಕೇಳಬಹುದು. ಪಾಪದ ದಂಡನೆ ಮಾತ್ರ
ವಾಗಿದ್ದಲ್ಲಿ, ಇದರ ಮೂಲಕ ಪಾಠವನ್ನು ಜಾರಿಗೆ ತರಬಹುದಿತ್ತು. ಆದರೆ ದೇವರ
ಎಲ್ಲಾ ಕಾರ್ಯಗಳಲ್ಲಿರುವಂತೆ, ಒಂದಕ್ಕಿಂತ ಹೆಚ್ಚು ಉದ್ದೇಶಗಳಿದ್ದವು. ಪಾಪವು
ದಂಡಿಸಲ್ಪಡುವುದುಮಾತ್ರವಲ್ಲ, ಪಾಪದ ಸಂಬಳ ಮರಣವೆನ್ನುವ ನ್ಯಾಯ
ಪ್ರಮಾಣ ಹೊಂದಾಣಿಕೆಯೊಂದಿಗೆ ಪುನರುತ್ಥಾನವೂ ಬರಬೇಕು ; ಈ ಪುನ
ರುತ್ಥಾನವು ಕೇವಲ ಜೀವನವನ್ನು ಪುನಃ ಕೊಡುವುದಷ್ಟೇ ಅಲ್ಲ ; ಆ ಮಹಿಮೆಯು

ಫಲಗಳನ್ನು ಸಾಧಿಸಲು ಒಬ್ಬ ಆಡಳಿತಗಾರನನ್ನು ಒದಗಿಸುವುದೇ ಆಗಿದೆ. ದೇವರಿಗೂ ಮಾನವನಿಗೂ ನಡುವೆ ಒಬ್ಬ ಮಧ್ಯಸ್ಥನನ್ನು ಸತ್ತವರೊಳಗಿಂದ ಎಬ್ಬಿಸುವುದೇ ಆಗಿದೆ. ಆತನು ಪಾಪ ಕ್ಷಮಾಪಣೆಯನ್ನು ನೀಡುವವನೂ, ದೇವರ ರಕ್ಷಣೆಯನ್ನು ತನ್ನ ಮೂಲಕ ಕೊಡುವವನೂ ಮತ್ತು ಈ ಮಹತ್ತರವಾದ ಉಚಿತಾರ್ಥವರಗಳನ್ನು ಹೊಂದಲು ಅರ್ಹರು ಯಾರೆಂಬುದನ್ನು ನಿರ್ಧರಿಸುವ ನ್ಯಾಯಾಧಿಪತಿಯೂ ಆಗಿರುತ್ತಾನೆ. ಈ ಎಲ್ಲಾ ಗುರಿಗಳನ್ನು ಸಾಧಿಸಲು ಬಲಿಯಾಗಬೇಕಾದ ವ್ಯಕ್ತಿಯು ಒಬ್ಬ ಪರಿಪೂರ್ಣವಾದ ನೀತಿವಂತ ಮಾನವನಾಗಿರಬೇಕಿತ್ತು. ಜೊತೆಗೆ ಆತನು ಬಲಿಯ ರೂಪದಲ್ಲಿ ದಂಡಿಸಲ್ಪಡುವ ಪ್ರಕೃತಿಯನ್ನು ಹೊಂದಿದವನಾಗಿದ್ದು – ತಾನು ಮಾತ್ರ ಪಾಪ ಮಾಡದವನಾಗಿರಬೇಕಿತ್ತು. ಆತನೇ "ಪಾಪವಾಗಿ ಮಾಡಲ್ಪಟ್ಟು, ನಮಗಾಗಿ "ಪಾಪ"ವೆಂದು ಆತನನ್ನು ಪರಿಗಣಿಸಿ, ಆತನು ನೀತಿವಂತನಾಗಿಯೂ, ಪರಿಶುದ್ಧನಾಗಿಯೂ, ಎಲ್ಲಾ ವಿಷಯಗಳಲ್ಲಿ ವಿಧೇಯವಾಗಿಯೂ ಇದ್ದು, ದ್ರೋಹಿಗಳೊಂದಿಗೆ ಹೂಣಲ್ಪಟ್ಟವ"ನಾಗಿದ್ದನು (ಯೆಶಾಯ 53 : 12, 9).

## ದೇವರಿಂದ ಹುಟ್ಟಿದವನಾದರೂ ಆದಾಮನ ಮಗನು

ತತ್ಪರಿಣಾಮವಾಗಿ ಅಪೋಸ್ತಲರು ಬರೆದಿರುವಂತೆ, ಇದಕ್ಕೆ ದೇವರ ಮಧ್ಯಸ್ಥಿಕೆಯು ಅವಶ್ಯಕತೆ ಬೇಕಾಗಿತ್ತು. "ನಿನ್ನ (ಮರಿಯಳ) ಮೇಲೆ ಪವಿತ್ರಾತ್ಮ ಬರುವದು ; ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವದು ; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು" (ಲೂಕ 1:35). ಹೀಗೆ ದೇವರು, "ಕಾಲವು ಪರಿಪೂರ್ಣವಾದಾಗ ತನ್ನ ಮಗನನ್ನು ಕಳುಹಿಸಿಕೊಟ್ಟನು. ಆತನು **ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ** ಧರ್ಮಶಾಸ್ತ್ರಾಧೀನನಾಗಿಯೂ ಬಂದನು" (ಗಲಾತ್ಯ 4:45). ಸ್ತ್ರೀಯಲ್ಲಿ ಹುಟ್ಟಿದವನಾದ್ದರಿಂದ ಆತನು ನಮ್ಮ ಪ್ರಕೃತಿಯನ್ನೇ ಹೊಂದಿದ್ದನು. ಅಂದರೆ ಶಿಕ್ಷೆಗೊಳಪಟ್ಟ, ಬಲಹೀನ ಮತ್ತು ಮರ್ತ್ಯ (ಸಾಯುವ) ಪ್ರಕೃತಿ ; ಆದರೆ, ದೇವರಿಂದ ಹುಟ್ಟಿದವನಾದ್ದರಿಂದ ಮಾನವನಿಂದಲ್ಲ. ಆತನು ಗುಣದಲ್ಲಿ ದೋಷರಹಿತನಾಗಿದ್ದನು. "ಪ ರಿ ಶು ದ್ಧ ನೂ, ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಗಿದ್ದನು" (ಇಬ್ರಿಯ 7:26). ಆದಾಮನಿಂದ ಮರಣದ ಶಾಪವನ್ನು ವಂಶ ಪಾರಂಪರ್ಯವಾಗಿ ಪಡೆದ ಆತನ ಪ್ರಕೃತಿಯಲ್ಲಿ ಪಾಪವು ಆತನನ್ನು ಹಿಡಿತದಲ್ಲಿ ಇಟ್ಟಿತ್ತು. ಆದರೆ ಅದಕ್ಕೆ ಆತನ ಗುಣದ ಮೇಲೆ ಹಿಡಿತವಿರಲಿಲ್ಲ ; ಯಾಕೆಂದರೆ ಆತನು ಯಾವಾಗಲೂ ತನ್ನ ತಂದೆಗೆ ಮೆಚ್ಚುಗೆಯಾದ ಕಾರ್ಯಗಳನ್ನೇ ಮಾಡುತ್ತಿದ್ದನು. ಆತನು ಸತ್ತಾಗ, "ಪಾಪದ ಪಾಲಿಗೆ ಒಂದೇಸಾರಿ ಸತ್ತನು" (ರೋಮಾಪುರ 6:10). ಆದರೆ ಆತನ ವಿಧೇಯತೆಗಾಗಿ ದೇವರು ಆತನನ್ನು ಎಬ್ಬಿಸಿದನು, "ಆತನನ್ನು ಸತ್ತವರೊಳಗಿಂದ

ಎಬ್ಬಿಸಲ್ಪಟ್ಟಿದ್ದರಿಂದ, ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನು ಆತನನ್ನು ಆಳುವುದಿಲ್ಲ" (ರೋಮಾಪುರ 6:9). "ಆದಕಾರಣ ಆತನು ತನ್ನ ಮೂಲಕ ದೇವರಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ; ಅವರ ಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ" (ಇಬ್ರಿಯ 7:25). ಆದ್ದರಿಂದ ನಾವು ವಿಜಯೋತ್ಸಾಹದಿಂದ ಪೌಲನಲ್ಲಿ ವಿಚಾರಿಸೋಣ. "ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ" (ರೋಮಾಪುರ 8:33).

ಆತನು ನಮ್ಮ ಪ್ರಕೃತಿಯಲ್ಲಿ ಪಾಲ್ಗೊಳ್ಳಬೇಕಾದುದು ಆತ್ಮೀಕ ಅವಶ್ಯಕತೆಯಾಗಿತ್ತು. ಆತನು ಮಾನವನಾಗಿ ಅಂದರೆ ನಮ್ಮಂತೆಯೇ ಪ್ರಕೃತಿಯನ್ನು ಹೊಂದಿದ್ದನು ಎಂದು ಸ್ಪಷ್ಟವಾಗಿ ಸತ್ಯವೇದದಲ್ಲಿ ತಿಳಿಸಲಾಗಿದೆ. ಯೋಹಾನನು ಹೇಳುತ್ತಾನೆ — ಯಾವನಾದರೂ ಅದನ್ನು ಒಪ್ಪದಿದ್ದಲ್ಲಿ (ನಿರಾಕರಿಸಿದಲ್ಲಿ) (ಯೋಹಾನನ ಕಾಲದಲ್ಲಿ ಅನೇಕರು ಯೇಸುವು ನಮ್ಮಂತೆಯೇ ಮಾಂಸದ ಶರೀರದಲ್ಲಿ ಹುಟ್ಟಿದನು – ಎಂಬುದನ್ನು ನಿರಾಕರಿಸಿದ್ದರು.) ಅಂತಹವರು ಸತ್ಯವನ್ನು ನಿರಾಕರಿಸುವವರಾಗಿದ್ದಾರೆ — ಅವರೇ ನಿಜವಾಗಿಯೂ ಕ್ರಿಸ್ತವಿರೋಧಿಗಳಾಗಿದ್ದಾರೆ (Anti Christ) (1 ಯೋಹಾನ 4 : 2). ಆತನು ಯೇಸುವು ಮಾಂಸದಲ್ಲಿ ಬಂದನು ಎಂಬುವುದನ್ನು ಬಲವಾಗಿ ಹೇಳುತ್ತಾ ಬಂದಿದ್ದಾನೆ — ಅಂದರೆ ಮಾನವರ ಮಾಂಸ, ದಾವೀದನ ಮಾಂಸ (ದೇಹ) — ಮಾಂಸವು (ದೇಹವು) ಪಾಪದ್ದಾದ್ದರಿಂದ ಸಾಯುವಂತದು (ಮರ್ತ್ಯ). ಆತನು (ಯೋಹಾನನು) ಈ ಬಲವಾದ ಆಧಾರವನ್ನು ಏಕೆ ಹಿಡಿದಿದ್ದನು ? ಯಾಕಂದರೆ ಅದನ್ನು ನಿರಾಕರಿಸಿದಲ್ಲಿ, ದೇವರ ಜ್ಞಾನ ಮತ್ತು ನೀತಿಯುಳ್ಳ ವ್ಯವಸ್ಥೆಯ ಬುಡವನ್ನೇ ಕಡಿದು ಹಾಕುತ್ತಿತ್ತು. ಹೋರಿ ಹೋತಗಳ ರಕ್ತವು ಪಾಪ ಪರಿಹಾರ ಮಾಡಲು ಅಸಾಧ್ಯ ಎನ್ನುವ ಮೂಲ ನೀತಿಯನ್ನೇ ಅದು ನಾಶಮಾಡುತ್ತದೆ. ನಮ್ಮ ರಕ್ಷಣೆಗೆ ಮುಂದಾಗಿ ದೇವರ ನೀತಿಯು ಪೂರ್ಣವಾಗಿ ತೋರಲ್ಪಡಬೇಕೆಂಬುದೇ ಉದ್ದೇಶವಾಗಿದೆ. ಕ್ರಿಸ್ತನ ಮೇಲೆ ಮರಣದ ಅಧಿಕಾರವು ಇಲ್ಲದೇ ಇದ್ದಲ್ಲಿ, ಆತನು ನೀತಿಯುತವಾಗಿ ಸಾಯಲು ಸಾಧ್ಯವಿರಲಿಲ್ಲ; ಈ ಮರಣದ ಅಧಿಕಾರವು ಆದಾಮನ ಮೂಲಕ, ಅಬ್ರಹಾಮು, ದಾವೀದ, ಮತ್ತು ತನ್ನ ತಾಯಿಯ ಮೂಲಕ ಬಾರದೇ ಇದ್ದಲ್ಲಿ ಆ ಮರಣದ ಅಧಿಕಾರವು ಆತನ ಮೇಲೆ ಇರುತ್ತಿರಲಿಲ್ಲ, **ಇತರರ** ಪಾಪವೇ ಆತನಲ್ಲಿ ಇದ್ದದ್ದು, ಇತರರ ಪಾಪವನ್ನು ತೆಗೆಯಲ್ಪಡುವುದೇ ಆತನ ಕಾರ್ಯವಾಗಿತ್ತು. ಇದು ಆತನ ಮೇಲಿಲ್ಲದೇ ಇದ್ದಲ್ಲಿ, ಅದನ್ನು ಆತನು

ಹೇಗೆ ತಾನೆ ಮಾಡಲು ಸಾಧ್ಯ? "ನಮ್ಮೆಲ್ಲರ ದೋಷಫಲವನ್ನು ಯೆಹೋವನು ಅವನ ಮೇಲೆ ಹಾಕಿದನು." (ಯೆಶಾಯ 53:6), ಈ ವಾಕ್ಯವನ್ನು ಅಲಂಕಾರವಾಗಿ ಉಪಯೋಗಿಸಲ್ಪಟ್ಟಿದೆ; ಯಾಕಂದರೆ ದೇವರು ನಮ್ಮೆಲ್ಲರನ್ನೂ ಕ್ರಿಸ್ತನಿಗಾಗಿ ಕ್ಷಮಿಸಲು ಉದ್ದೇಶಿಸಿದ್ದಾನೆ. ಸರಿಯಾದ ಅರ್ಥದಲ್ಲಿ ಹೇಳುವುದಾದರೆ, ಇನ್ನೂ ಕೂಡ ನಮ್ಮ ಪಾಪಗಳನ್ನು ಆತನ ಮೇಲೆ ಹೊರಿಸಿದ್ದಾನೆ ಎಂಬ ಅರ್ಥವನ್ನೇ ಕೊಡುತ್ತದೆ; ಏದೇನಿನಿಂದ ಮರಣವನ್ನು ಪಾರಂಪರ್ಯವಾಗಿ ಹೊಂದಿದ ಪ್ರಕೃತಿಯಲ್ಲಿ ಆತನನ್ನು ಉಂಟುಮಾಡಿ, ಈ ಕಾರ್ಯದ ಪ್ರಾರಂಭವನ್ನು ಮಾಡಲಾಯಿತು. ಈ ಸಂಪೂರ್ಣ ಕಾರ್ಯವಿಧಾನವನ್ನು ಎಲ್ಲಾ ವಿಷಯಗಳಲ್ಲಿ ದೇವರ ನೀತಿಯನ್ನು ಪ್ರತಿಬಿಂಬಿಸುವ ದೇವರ ಯೋಜನೆಗೆ ಸರಿಯಾಗಿ ನಡೆಸಲಾಗಿದೆ. ದೇವರ ಯೋಜನೆಯ ರೀತ್ಯಾ ಬಲಿಯಾಗಿ ಅರ್ಪಿಸಲ್ಪಡುವವನು, ತನ್ನ ಪ್ರಕೃತಿಯ ನಿಮಿತ್ತ ಮರಣದ ದಾರಿಯಲ್ಲಿದ್ದರೂ, ಆತನು ಯಾವ ಸುಕ್ಕೂ, ಕಳಂಕವೂ ಇಲ್ಲದ, ಪಾಪರಹಿತನಾದ, ದೇವರ ಕುರಿಮರಿಯಾಗಿರಬೇಕಿತ್ತು. ದೇವರು ಅಂತಹ ಮಾನವನನ್ನು ನೀಡಲು ಒಂದು ಹೆಜ್ಜೆ ಮುಂದಿಟ್ಟನು. ಮೇರಿಯ ಮೂಲಕ, ದೇವರ ಶಕ್ತಿಯಿಂದ ಉಂಟುಮಾಡಲ್ಪಟ್ಟ ಆ ಮನುಷ್ಯನು ಒಂದು ಬಲಿಗೆ ಬೇಕಾದ ಎರಡು ಅಗತ್ಯ ಅರ್ಹತೆಗಳನ್ನು ಒಟ್ಟಾಗಿ ಪಡೆದಿದ್ದನು. ಏದೆನಿನಲ್ಲಿ ಶಿಕ್ಷೆಗೊಳಗಾದ ಪ್ರಕೃತಿಯನ್ನೇ ಹೊಂದಿದ್ದನು. ಆದ್ದರಿಂದ ಆತನನ್ನು ಶಿಲುಬೆಗೆ ಜಡಿದಾಗ, ತಪ್ಪಾಗಲಿಲ್ಲ. "ಯೆಹೋವನು ಆತನನ್ನು ಜಜ್ಜಿ ಸಂತೋಷಪಟ್ಟನು" (ಯೆಶಾಯ 53:10) (ಹಳೇ ಭಾಷಾಂತರ). ಪಾಪವನ್ನು ಮಾಡಲು ಯೆಹೋವನು ಸಂತೋಷಿಸುತ್ತಾನೋ ? ಇಲ್ಲ. ಆದ್ದರಿಂದ ಆ ಕಾರ್ಯವು ಸರಿಯಾದದ್ದು. ಕ್ರಿಸ್ತನು ಮರಣದ ಶಿಕ್ಷೆಗೊಳಗಾದ ಆದಾಮನ ಸಂತತಿಯಾಗಿಲ್ಲದೇ ಇದ್ದಲ್ಲಿ, ದೇವರು ಮಾಡಿದ್ದು ಹೇಗೆತಾನೆ ಸರಿಯಾಗಿದೆ?

## ಆತಂಕಪಡಬೇಕಾದ ಅಗತ್ಯವಿಲ್ಲ

"ಯಾವುದೇ ರೀತಿಯಲ್ಲಿ ಅಥವ ಅರ್ಥದಲ್ಲಿ ಕ್ರಿಸ್ತನು ಮರಣದ ಅಧಿಕಾರಕ್ಕೊಳಪಟ್ಟಿದ್ದನೆಂಬ ಭಾವನೆಯನ್ನು ಕೇಳಿದಾಗ ನಮಗೆ ದಿಗ್ಭ್ರಮೆಯುಂಟಾಗುತ್ತದೆ" ಎಂದು ಕೆಲವರು ಹೇಳಬಹುದು. ಒಳ್ಳೇದು, ಹಾಗಿದ್ದಲ್ಲಿ ಪೌಲನು ಹೇಳುವುದನ್ನು ಕೇಳಿದಾಗ ನಿಮಗೆ ಮತ್ತಷ್ಟು ದಿಗ್ಭ್ರಮೆಯಾಗುತ್ತದೆ. "ಕ್ರಿಸ್ತನು ಸತ್ತಮೇಲೆ ಜೀವಿತನಾಗಿ ಎದ್ದು ಬಂದುದರಿಂದ ಆತನು ಇನ್ನುಮುಂದೆ ಸಾಯತಕ್ಕವನಲ್ಲ, **ಮರಣವು ಇನ್ನೂ ಆತನನ್ನು ಆಳುವುದಿಲ್ಲವೆಂದು** ನಮಗೆ ತಿಳಿದಿದೆ. **ಸತ್ತದ್ದು ಒಂದೇ ಸಾರಿ** ಅದು **ಪಾಪದ ಪಾಲಿಗೆ.** ಆತನು ಜೀವಿಸುವುದು

ದೇವರಿಗಾಗಿಯೇ." ಅಪೋಸ್ತಲರ ಘೋಷಣೆಯಲ್ಲಿ ಹಾಗೆಣ ವಿವರಣೆಯಲ್ಲಿ, ಮರಣವು ಆತನ ಮೇಲೆ ಒಂದು ಸಾರಿ ಅಧಿಕಾರವನ್ನು ಹೊಂದಿತ್ತು ಎಂಬುದೇ ಆಗಿದೆ. ಈ ವಿಷಯದ ಅರ್ಥವನ್ನು ಸರಿಯಾಗಿ ಗ್ರಹಿಸಿದಾಗ, ದಿಗ್ಭ್ರಮೆಗೊಳ್ಳುವ ಆಗತ್ಯವಿಲ್ಲ. ತದ್ವಿರುದ್ಧವಾಗಿ, ಆತ್ಮೀಕ ಗ್ರಹಿಕೆಯು ದೇವರ ಗೌರವದೊಂದಿಗೆ ಯಾವ ರಾಜಿಯೂ ಇಲ್ಲದಂತೆ, ಆತನ ಪ್ರೀತಿಯು ಹೇಗೆ ಮುಂದುವರೆಯುತ್ತಾ ಬಂದಿದೆ ಎಂಬುದನ್ನು ನೋಡಬಹುದಾಗಿದೆ, ಮೆಚ್ಚಬಹುದಾಗಿದೆ; ಯೋಗ್ಯದವರಾಗಿ ಕ್ರಿಸ್ತನ ಮೂಲಕ ಆರಾಧಿಸಬಹುದಾಗಿದೆ. ಕೆಲವರು ಹೇಳಬಹುದು "ದೇವರು ಪ್ರೀತಿ ಸ್ವರೂಪನು, ಆತನು ತನ್ನ ಅಂತಸ್ತಿನಲ್ಲಿಯೇ ನಿಂತಿರುವುದಿಲ್ಲ". ಹಾಗಿದ್ದಲ್ಲಿ, ಅಂತಹ ಜನರು ಇದರ ಬಗ್ಗೆ ಏನು ಹೇಳುತ್ತಾರೆ? "ಕುರುಡಾದ ಪಶುವನ್ನು ಯಜ್ಞಕ್ಕೆ ಒಪ್ಪಿಸುವದು ದೋಷವಲ್ಲವೆಂದು ನೆನಸುತ್ತೀರೋ? ಕುಂಟಾದದ್ದನ್ನೂ ರೋಗದ ಪಶುವನ್ನೂ ಅರ್ಪಿಸುವದು ದೋಷವಲ್ಲವೆಂದು ನಂಬುತ್ತೀರೋ? ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ—ಇಂಥದನ್ನು ನಿನ್ನ ದೇಶಾಧಿಪತಿಗೆ ಒಪ್ಪಿಸು; ನಿನಗೆ ಮೆಚ್ಚುವನೋ? ಪ್ರಸನ್ನನಾಗುವನೋ? "ಒಬ್ಬನು ಹರಕೆ ಹೊತ್ತು ತನ್ನ ಹಿಂಡಿನಲ್ಲಿ ಗಂಡು ಪಶುವಿದ್ದರೂ ಕಳಂಕವಾದ ಪಶುವನ್ನು ಯೆಹೋವನಿಗೆ ಯಜ್ಞಮಾಡಿದರೆ ಆ ಮೋಸಗಾರನಿಗೆ ಶಾಪವು ತಗಲಲಿ; ನಾನು ರಾಜಾಧಿರಾಜ, ನನ್ನ ನಾಮವು ಅನ್ಯ ಜನಾಂಗಗಳ ಭಯಭಕ್ತಿಗೆ ಈಡಾಗಿದೆ; ಇದು ಸೇನಾಧೀಶ್ವರ ಯೆಹೋವನ ನುಡಿ." (ಮಲಾಕಿಯ 1:8, 14). ಈ ನಿದರ್ಶನದಿಂದ —ಇದು ದೇವರದೇ ನಿದರ್ಶನವಾಗಿರುತ್ತದೆ —ದೇವರು ನಮ್ಮನ್ನು ಅಂಗೀಕರಿಸುವ ರೀತಿಯಲ್ಲಿ ಆತನನ್ನು ಸಮೀಪಿಸಬೇಕಾದಲ್ಲಿ ದೇವರು ತನ್ನನ್ನು ಘನಪಡಿಸಬೇಕೆಂಬುದೇ ಪ್ರಥಮ ಷರತ್ತಾಗಿದೆ. "ಮಗನು ತಂದೆಗೆ ಮಾನಸಲ್ಲಿಸುತ್ತಾನಲ್ಲಾ; ಆಳು ದಣಿಗೆ ಭಯಭಕ್ತಿ ತೋರಿಸುತ್ತಾನಷ್ಟೆ; ನಾನು ತಂದೆಯಾಗಿರಲು ನನಗೆ ಸಲ್ಲುವ ಮಾನವೆಲ್ಲಿ; ದಣಿಯಾಗಿರಲು ನನಗೆ ಸಲ್ಲುವ ತೋರಿಸುವ ಭಯಭಕ್ತಿಯೆಲ್ಲಿ?" (ಮಲಾಕಿಯ 1 : 6). ಮಾನವ ವ್ಯವಹಾರದಲ್ಲಿ ಮರ್ಯಾದೆ ತೋರಿಸುವುದು ಎಲ್ಲರಿಗೂ ಅನ್ವಯಿಸುವ ನಿಯಮವಾಗಿದೆ. ಬಹುತೇಕವಾಗಿ ಅದು ಇಲ್ಲದಂತಾಗಿದೆ. ಆದರೆ ನೈಜ ಮರ್ಯಾದೆಯೊಂದಿದೆ, ಅದು ಅಗತ್ಯವಾದುದು. ಅಧಿಕಾರಕ್ಕೆ ಸಮಂಜಸವಲ್ಲದ ನಡತೆಯ ಮಾರ್ಗಗಳಿವೆ. ಈಗ ಪರಿಶುದ್ಧನಾದ, ಜ್ಞಾನಿಯಾದ, ಸರ್ವಶಕ್ತನಾದ ಹಾಗೂ ಮಹಾನ್ ದೇವರು ಇಲ್ಲಿದ್ದಾನೆ; ಕನಿಷ್ಟರಾದ, ಪಾಪಿಗಳಾದ, ಅಜ್ಞಾನಿಗಳಾದ ಹಾಗೂ ಆತನ ಬಲಹೀನ ಸೃಷ್ಟಿಗಳಾದ ನಾವು ಇಲ್ಲಿದ್ದೇವೆ. ಆತನ (ದೇವರ) ಹಕ್ಕುಗಳನ್ನು ನಾವು ಆಕ್ರಮಿಸುವುದಾದರೆ, ಒಂದು ಕ್ಷಣದಲ್ಲಿ ನಮ್ಮನ್ನು ನಾಶಪಡಿಸುತ್ತಾನೆ. ನಮ್ಮೊಂದಿಗೆ ಯಾವ ರೀತಿಯ ಕಾರ್ಯವೂ ಇರುವುದಿಲ್ಲ. ಆತನ ನೀತಿಯನ್ನು ಎತ್ತಿ ಹಿಡಿಯದೇ, ಆತನ ಮಹಿಮೆಯನ್ನು

ಸಮರ್ಥಿಸುವುದೇ, ಅದು ಹೇಗೆ ತಾನೆ ಆತನು ಅಷ್ಟೊಂದು ಕರುಣೆಯುಳ್ಳವನೂ ದೀರ್ಘಶಾಂತನೂ, ಹಾಗೂ ಕೃಪೆಯುಳ್ಳವನೂ ಆತನನ್ನು ಸಮೀಪಿಸಲು ನಮಗೆ ಅನುಮತಿಯನ್ನು ನೀಡುವವನೂ ಆಗಿದ್ದಾನೆ ಸಾಧ್ಯವಿಲ್ಲ; ಆತನು ಮಾಡುವುದೂ ಇಲ್ಲ ಶಿಲುಬೆಯಲ್ಲಿ ಬಲಿಯಾದ ಕ್ರಿಸ್ತನಲ್ಲಿ ನಮ್ಮನ್ನು ಕರೆದಿದ್ದಾನೆ. "ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ, ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನು" (2 ಕೊರಿಂಥ 5 : 19) ಆದರೆ ಸಂಯುಕ್ತ ಪ್ರತಿನಿಧಿಯಾಗಿ ಪಾಪವನ್ನು ದಂಡಿಸದೇ ಬಿಡಲಿಲ್ಲ. ಮಾನವ ಕುಲವು, ತಾನಿರುವ ಸ್ಥಿತಿಯಲ್ಲಿಯೇ (ಪಾಪದ ಸ್ಥಿತಿ) ತನ್ನ ಮಗನಾದ ಕ್ರಿಸ್ತನಲ್ಲಿ ಶಿಲುಬೆಗೆ ಹಾಕಲ್ಪಟ್ಟಿತು. ಕ್ರಿಸ್ತನಲ್ಲಿ ಶಿಲುಬೆಗೆ ಹಾಕಲ್ಪಟ್ಟ ಮಾನವನು, ಕೆಳಗೆ ಹಾಕಲ್ಪಟ್ಟನು; ಮಾನವನು ಕೊಲ್ಲಲ್ಪಟ್ಟನು; ದೇವರು ಏರಿಸಲ್ಪಟ್ಟು ಮಹಿಮೆಗೊಂಡನು.

## ಪರಲೋಕದ ಗೌರವ

ಇದೇ ಪರಲೋಕದ ಗೌರವ; ಪರಮಾಧಿಕಾರ ಹಾಗೂ ಪ್ರೀತಿಯನ್ನು ಒಂದಾಗಿಸಿ, ಪಾಪಿಗಳು ದೇವರನ್ನು ಸಮೀಪಿಸಲು ನೇಮಕ ಮಾಡಲ್ಪಟ್ಟ ರೀತಿಯಾಗಿರುತ್ತದೆ. "ನಾನು ರಾಜಾಧಿರಾಜನಾಗಿದ್ದೇನೆ" ಎತ್ತಿ ಹಿಡಿಯಲ್ಪಟ್ಟ ಆತನ ನೀತಿಯು ಎದುರಿನಲ್ಲಿ ತಲೆಬಾಗಿದರೆ, ಆತನು ನಮ್ಮನ್ನು ಕ್ಷಮಿಸುತ್ತಾನೆ ಹಾಗೂ ದೀರ್ಘ ಶಾಂತಿಯುಳ್ಳವನಾಗಿರುತ್ತಾನೆ. ಆತನ ಎತ್ತಿ ಹಿಡಿಯಲ್ಪಟ್ಟ ನೀತಿಯಾವುದೆಂದರೆ —ದಯೆಯೂ ನ್ಯಾಯವೂ ಒಟ್ಟಾಗಿ ಕೂಡುವ ನೀತಿ — ಅದನ್ನು ಈಡು ಬಲಿ ಎಂದು ಹೇಳಲಾಗುವುದಿಲ್ಲ. ಯಾವ ಮನುಷ್ಯನ ಮೇಲೆ ಮರಣದ ಅಧಿಕಾರ ಇಲ್ಲವೋ ಅಂತಹವರನ್ನು ಮರಣಕ್ಕೆ ಒಪ್ಪಿಸುವುದು ನೀತಿಯಲ್ಲ. "ಆ ಮನುಷ್ಯನು ಸಾಯುವುದಾದಲ್ಲಿ, ನಿಮ್ಮನ್ನು ಬಿಡುಗಡೆ ಮಾಡುತ್ತೇನೆ" ಎಂದು ನಮಗೆ ಹೇಳುವುದು ದಯೆಯಲ್ಲ. ಅಂತಹ ಅಭಿಪ್ರಾಯವೇನಾದರೂ ಇದ್ದಲ್ಲಿ, ಅದು ದೇವರ ದಯೆ, ಜ್ಞಾನ ಹಾಗೂ ನೀತಿಯನ್ನು ಅಸ್ಪಷ್ಟಗೊಳಿಸುತ್ತದಷ್ಟೆ; ಆದರೆ ಸತ್ಯ ವೇದದ ಅಭಿಪ್ರಾಯವು ಅತ್ಯಂತ ಶ್ರೇಷ್ಠವಾದುದಾಗಿದೆ —ದೈವೀಕ ಜ್ಞಾನದ ವಿಜಯೋತ್ಸಾಹವಾಗಿದೆ. ಈಗ ದೇವರು ಹೇಳುತ್ತಾನೆ "ನೀವು ನಿಮ್ಮ ಸ್ಥಿತಿಯನ್ನು ಅಂಗೀಕರಿಸುವುದಾದರೆ, ಮಾನಸಾಂತರ ಪಡಿ; ಆತನ ರೆಕ್ಕೆಗಳಡಿಯಲ್ಲಿ ಬನ್ನಿರಿ, ನಾನು ನಿಮ್ಮನ್ನು ಪುನಃ ಸ್ವೀಕರಿಸಿ, ನಿಮ್ಮನ್ನು ಕ್ಷಮಿಸುತ್ತೇನೆ. ನನ್ನ ನೀತಿಯು ಅವನಲ್ಲಿ ಘೋಷಿಸಲ್ಪಟ್ಟದೆ. ನಿರಂತರವಾದ ಕಾಲವನ್ನು ಆತನಿಗೆ ಕಿರೀಟವಾಗಿ ಇಟ್ಟದ್ದೇನೆ; ಯಾಕಂದರೆ ಆತನು ನೀತಿಯನ್ನು ಪ್ರೀತಿಸಿ, ಅಪರಾಧವನ್ನು ದ್ವೇಷಿಸಿದನು; ಮರಣದವರೆಗಣ ವಿಧೇಯನಾದನು, ನಾನು ಅವನಿಗೆ ನಿತ್ಯಜೀವವನ್ನು ಕಿರೀಟವಾಗಿ ಕೊಟ್ಟದ್ದೇನೆ. ನೀವು ಆತನಿಗೆ ಶರಣಾಗತರಾಗಿ, ಆತನಲ್ಲಿ ನಂಬಿಕೆ

ಇಟ್ಟಲ್ಲಿ, ಆತನ ಹೆಸರನ್ನು ಧರಿಸಿಕೊಂಡಲ್ಲಿ, —ಅದಕ್ಕಿಂತ ಬೇರೆ ಯಾವ ಹೆಸರೂ ನಿಲ್ಲುವಂತದಲ್ಲ —ಆ ನಿತ್ಯ ಜೀವವು ಆತನಲ್ಲಿ ನಿಮಗೆ ಇಡಲ್ಪಟ್ಟಿದೆ. ಆತನ ಆಜ್ಞೆಗಳಿಗೆ ವಿಧೇಯರಾಗಿರಿ, ಆತನಿಗಾಗಿ ನಾನು ನಿಮ್ಮನ್ನು ಸ್ವೀಕರಿಸಿ, ನಿಮ್ಮನ್ನು ಕ್ಷಮಿಸುತ್ತೇನೆ. ಆಗ ನೀವು ನನ್ನ ಮಕ್ಕಳಾಗುವಿರಿ." ಇದೇ ದಯೆಯ ಹಾಗೂ ಜ್ಞಾನದ ಭವ್ಯವಾದ ವಿಷಯವಾಗಿದೆ. ಆದರೆ ಕ್ರಿಸ್ತನ ರಕ್ತವನ್ನು ಒಂದು ಅಮೂಲ್ಯವಾದ ವಸ್ತುವೆಂದು ನಮಗೆ ಕೊಟ್ಟು, ಅದನ್ನು ನಾವು ಮುಟ್ಟಿದಾಗ ನಾವು ಪರಿಶುದ್ಧರಾಗುತ್ತೇವೆ ಎಂಬುದು ಕೇವಲ ನಿಸ್ಸಾರವಾದ ಕಲ್ಪನೆಯಾಗಿದೆ. ಎಲ್ಲಾ ಕಾರ್ಯವನ್ನೂ ದೇವರೇ ನಿರ್ವಹಿಸುತ್ತಾನೆ. ಈ ಸುಂದರ ಸಾಧನದಿಂದ ದೇವರು ನಮ್ಮ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸುತ್ತಾನೆ —ನಾವು ಕ್ರಿಸ್ತನನ್ನು ಅಂಗೀಕರಿಸಿ ಆತನಲ್ಲಿ ದೀಕ್ಷಾಸ್ನಾನ ಹೊಂದಿದರೆ, ಕ್ರಿಸ್ತನು ಮಾಡಿದ ಕಾರ್ಯಕ್ಕಾಗಿ ದೇವರು ನಮ್ಮನ್ನು ಕ್ಷಮಿಸುತ್ತಾನೆ. ದೀಕ್ಷಾಸ್ನಾನದಲ್ಲಿ ನಾವು ಆತನ ಮರಣದಲ್ಲಿ ದೀಕ್ಷಾಸ್ನಾನ ಹೊಂದುತ್ತೇವೆ —ಆತನ ರಕ್ತದಲ್ಲಿ ನಮ್ಮ ಪಾಪಗಳು ತೊಳೆಯಲ್ಪಡುತ್ತವೆ. ಈ ಕಾರ್ಯದಲ್ಲಿ, ದೇವರು ಕ್ರಿಸ್ತನಲ್ಲಿ ನಮಗೆ ಏನನ್ನು ನೀಡುತ್ತಾನೋ ಅದಕ್ಕೂ ನಮ್ಮ ಕಾರ್ಯಗಳಿಗೂ ನಡುವೆ ಒಂದು ಸಂಬಂಧವಿದೆ. ಅದೇನೆಂದರೆ — ಪ್ರಾಯಶ್ಚಿತ್ತದ ಶುದ್ಧೀಕರಿಸುವ ಫಲವು ನಮ್ಮ ಅನುವರ್ತನೆಯ ಮೇಲೆ ಅವಲಂಬಿಸಿರುತ್ತದೆ. ಅಂದರೆ, ನಾವು ದೇವರ ನೀತಿಗೆ ಅಡಿಯಾಳಾಗದಿದ್ದಲ್ಲಿ, ಕ್ರಿಸ್ತನ ರಕ್ತವು ನಮಗೆ ಏನೂ ಪ್ರಯೋಜನಕಾರಿಯಾಗುವುದಿಲ್ಲ —ಅಲ್ಲದೆ, ದೇವರ ದಯೆ ಹಾಗೂ ಪ್ರೀತಿಗೆ ಪಾತ್ರರಾಗಲು ಸಾಧ್ಯವಾಗುವುದಿಲ್ಲ. ಈ ವಚನವು ನಿಮಗೆ ಜ್ಞಾಪಕವಿರಬಹುದು —"ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ........ಕ್ರಿಸ್ತನ ರಕ್ತವು ಸಕಲ ಪಾಪವನ್ನೂ ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ." (1 ಯೋಹಾನ 1 : 7). ನಾವು ಬೆಳಕಿನಲ್ಲಿ ನಡೆಯದೇ ಹೋದರೆ, ಅದಕ್ಕೆ (ಕ್ರಿಸ್ತನ ರಕ್ತಕ್ಕೆ) ಯಾವ ಶಕ್ತಿಯೂ ಇರುವುದಿಲ್ಲ. ಅಂದರೆ ಸಂಪ್ರದಾಯ ಬದ್ಧ ಮತೀಯರು ಹೇಳುವಂತೆ ಕ್ರಿಸ್ತನ ರಕ್ತವು ಯಕ್ಷಿಣಿಯ ವಸ್ತುವಲ್ಲ. ಅಥವ ಕೆಲವರು ಹೇಳುವಂತೆ ತಾನಾಗಿಯೇ ಕಾರ್ಯಾಚರಣೆ ನಡೆಸುವಂತಹುದಲ್ಲ. ಇಲ್ಲವೇ ಮತ್ತೆ ಕೆಲವರು ಹೇಳುವಂತೆ ಅದು ಶಕ್ತಿಹೀನವಲ್ಲ.

(ಮುಂದುವರೆಯುವುದು)

# ಶುಭ ವಾರ್ತೆ-3

—ವಿ. ಜಯವಂತ, ಮಂಡ್ಯ

## ಸುವಾರ್ತೆಯನ್ನು ಓದಿಲ್ಲ ಮತ್ತು ಅಧ್ಯಯನ ಮಾಡಿಲ್ಲ

ಇತ್ತೀಚಿನ ಕಾಲಗಳಲ್ಲಿ ಸುವಾರ್ತೆಯನ್ನು ಓದುವುದಂತೂ ವಿರಳವೇ ಆಗಿರುವಲ್ಲಿ ಅಧ್ಯಯನದ ಸುದ್ದಿ ಎಲ್ಲಿ ಬರುತ್ತದೆ. ಈ ರೀತಿಯ ನಡವಳಿಕೆಗೆ ಕಾರಣವಾದರೂ ಏನು ಎಂದು ಯೋಚಿಸಿದರೆ, ಅದು ನಮ್ಮ ಮುಂದಾಳುಗಳ ಮಾರ್ಗದರ್ಶನವೇ ಆಗಿದೆ. ಹಿರಿಯರಲ್ಲಿ ಈ ಅಭ್ಯಾಸವು ಅಸಡ್ಡೆಗೊಳಗಾಗಿದೆ. ನಾಯಕರು ತಮ್ಮ ದಿನನಿತ್ಯದ ಲೌಕಿಕ ಕಾರ್ಯಗಳಲ್ಲೇ ಮಗ್ನರಾಗಿರುತ್ತಾರೆ. ತಂದೆ ತಾಯಿಗಳಿಗೆ ಬಿಡುವೇ ಇರುವುದಿಲ್ಲ. ನಾಯಕರು ಜನರ ಮುಂದೆ ಸತ್ಯವೇದ ವಾಕ್ಯಗಳನ್ನು ಉದಾಹರಿಸುವದಾಗಲಿ ಇಲ್ಲವೆ ಅವುಗಳಲ್ಲಿ ಆಸಕ್ತಿಯಿಂದ ವಿವರಿಸುವುದೇ ಆಗಲಿ ಪರಿಪೂರ್ಣವಾಗಿ ಕೈಬಿಡಲಾಗಿದೆ. ಎಲ್ಲೋ ಯಾವಾಗಲಾದರೂ ಒಂದು ವಾಕ್ಯವನ್ನು ಹೇಳಿದರೂ ಅದನ್ನು ಪರಿಷ್ಕಾರವಾಗಿ ಸತ್ಯಕ್ಕೆ ತಕ್ಕಹಾಗೆ ವಿವರಿಸುವದನ್ನು ಕಾಣುವದಿಲ್ಲ. ಬೋಧಕರಾದವರೂ ಈ ವಾಕ್ಯಗಳ ವಿವರಣೆಗೆ ಬದಲು ಲೌಕಿಕ ವಿಷಯಗಳ ಸಂಗತಿಗಳನ್ನೇ ಕುರಿತು ಮಾತನಾಡುವವರಾಗಿರುತ್ತಾರೆ.

ನಾವು ಸತ್ಯವೇದವನ್ನು ಓದುವ ಮತ್ತು ಅಭ್ಯಾಸಿಸುವ ಕಡೆಗೆ ಗಮನಹರಿಸದಿರುವದರಿಂದ ಒದಗುವ ಹಾನಿ ಏನೆಂಬುದನ್ನು ನಾವು ಅರಿತಿಲ್ಲ ಇಲ್ಲವೆ ನಮಗೆ ಬೋಧನೆ ಒದಗಿಸುವ ಸುವಾರ್ತಾ ಸೇವಕರೂ ತಿಳಿಸಿಲ್ಲ. ಇದರಿಂದ ಜನರು ಸಂಪ್ರದಾಯದಲ್ಲೂ ಅಸ್ವಸ್ಥಬೋಧನೆಗಳಲ್ಲೂ ಆಸಕ್ತರಾಗಿ ದೈವ ವಾಕ್ಯಗಳ ನಿಜ ಸಂಗತಿಗಳನ್ನು ಅರಿಯದವರಾಗಿರುತ್ತಾರೆ. ಸುವಾರ್ತಾ ಕೂಟಗಳು ಮತ್ತು ಪುನರುಜ್ಜೀವಿತ ಕೂಟಗಳು ಜನರಿಗೆ ತಕ್ಷಣದ ಆಸಕ್ತಿಯನ್ನು ಹುಟ್ಟಿಸುವಂಥವುಗಳೂ ಆಗಿದ್ದು ಜೀವನದಲ್ಲಿ ಸದಾಕಾಲಕ್ಕೂ ನಿಲ್ಲುವ ಸಂಗತಿಗಳಾಗಿರುವದಿಲ್ಲ. ಇವುಗಳಲ್ಲಿ ಆಸಕ್ತಿಯೂ ಬೇಗನೆ ಬರುವದು ನಿಜ ಆದರೆ ಅದೇ ರೀತಿ ಅದು ಬೇಗನೆ ಮಾಯವಾಗುತ್ತದೆ. ಮಾನವನ ಸಂಪೂರ್ಣ ಬದಲಾವಣೆಗೆ ಇಲ್ಲಿ ಅವಕಾಶವಾಗಲೀ ಇಲ್ಲವೆ ಸತ್ಯಸಂಗತಿಗಳ ವಿಷಯದ ಬಗ್ಗೆ ಸಂಪೂರ್ಣವಾದ ಅರಿವಾಗಲೀ ಉಂಟಾಗುವದಿಲ್ಲ.

ದೇವರ ವಾಕ್ಯಗಳ ವಿವರಣೆಗಳನ್ನು ಹೇಳುವಾಗ ಮಾನವನು ತನ್ನ ಆಲೋಚನೆಗಳಿಗೆ ಅನುಕೂಲ ರೀತಿಯಲ್ಲಿ ವಿವರಿಸುವದೂ ಸಾಂಪ್ರದಾಯಿಕವಾಗಿ ಸಾಗುತ್ತಾ ಬಂದಿದೆ. ಈ ಜನರು ಪ್ರವಾದಿಸುವದು ಹೇಗಿದೆ ಎಂದು ಪ್ರವಾದಿಗಳು ಹಿಂದೆಯೇ ನುಡಿದಿರುತ್ತಾರೆ. "ನಿಮಗೆ ಪ್ರವಾದಿಸುವ ಪ್ರವಾದಿಗಳ ಮಾತುಗಳನ್ನು ಕೇಳಬೇಡಿರಿ; ನಿಮ್ಮಲ್ಲಿ ವ್ಯರ್ಥ ನಿರೀಕ್ಷೆಯನ್ನು ಹುಟ್ಟಿಸುತ್ತಾರೆ; ಯೆಹೋವನ ಬಾಯಿಂದ ಹೊರಟದ್ದನ್ನು ನುಡಿಯದೆ ಸ್ವಂತ ಹೃದಯಕ್ಕೆ ಹೊಳೆದದ್ದನ್ನು ಹೇಳುತ್ತಾರೆ" ಯೆರೆಮೀಯ 23:16 ಇಂಥ ಕೂಟಗಳಿಂದ ಜನರಿಗಾಗುವ ಪ್ರಯೋಜನವೇನು.? ಈ ರೀತಿಯಲ್ಲಿ ಮುಂದಿನ ಕಾಲದಲ್ಲಿ ನಡೆಯುತ್ತದೆಂಬುದನ್ನು ಪ್ರಥಮ ಶತಮಾನದಲ್ಲೇ ಅಪೋಸ್ತಲರು ಪ್ರವಾದಿಸಿರುವರು. ಅವರು ಹೇಳಿರುವ ಎಚ್ಚರಿಕೆಯ ಮಾತುಗಳನ್ನು ನಾವು ಗಮನಿಸಬೇಕು.

ಮತ್ತಾಯ 15:3: ಆತನು ಅವರಿಗೆ ಉತ್ತರ ಕೊಟ್ಟದ್ದೇನೆಂದರೆ ನೀವೂ ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ.

ಮಾರ್ಕ 7:7,8. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬುದೇ. ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ.

ವಚನ 13: ಹೀಗೆ ನೀವು ಕಲಿಸುತ್ತಾ ಬಂದಿರುವ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ.

ಕೊಲಸ್ಸೆ 2:8: ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನು ಪ್ರಾಪಂಚಿಕ ಬಾಲಬೋಧನೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸಕರವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ.

## ಸತ್ಯವೇದವನ್ನು ಓದಲು ಇಸ್ರಾಯೇಲ್ಯರಿಗೆ ಆಜ್ಞೆ ಇದ್ದಿತು

ದೇವರ ವಾಕ್ಯದ ಕಡೆಗೆ ತಾತ್ಸಾರ ಮನೋಭಾವವುಳ್ಳವರಾದರೆ ಅದರಿಂದ ಮಹತ್ತರವಾದ ಮತ್ತು ಅಗತ್ಯವಾದ ಎಚ್ಚರಿಕೆಯನ್ನು ಇಸ್ರಾಯೇಲ್ಯರಿಗೆ ತಿಳಿಸಲಾಗಿತ್ತು.

(ಮುಂದುವರೆಯುವುದು)